

## ನಕಾರಾತ್ಮಕ ಧೋರಣೆ

ಖಿನ್ನತೆಗೆ ಒಳಗಾಗಿರುವ ರೋಗಿಯೊಬ್ಬನನ್ನು ಡಾಕ್ಟರ್ ವಿಚಾರಿಸಿದರು, 'ಏನು ತೊಂದರೆ?'

ರೋಗಿ: ಮನಸ್ಸಿನಲ್ಲಿ ಸದಾ ನಕಾರಾತ್ಮಕ ಯೋಚನೆಗಳೇ ಬರುತ್ತಿವೆ, ನಿಲ್ಲುತ್ತಲೇ ಇಲ್ಲ...

ಡಾಕ್ಟರ್: ಎಂತೆಂಥಾ ವಿಚಾರಗಳು ಬರುತ್ತವೆ?

ರೋಗಿ: ಎಂಥವೆಂದರೆ, ನಾನೀಗ ನಿಮ್ಮಲ್ಲಿಗೆ ಬಂದಾಗ ಓಪಿಡಿಯಲ್ಲಿ ಒಬ್ಬ ರೋಗಿಯೂ ಕಾಣಿಸಲಿಲ್ಲ. ಆಗ... 'ಈ ಡಾಕ್ಟರ್ ಸಾಹೇಬರ ಬಳಿ ಒಂದೂ ರೋಗಿ ಇಲ್ಲ... ಇವರ ಗಳಿಕೆ ಎಷ್ಟಿರಬಹುದು... ಮನೆ ಖರ್ಚು ಹೇಗೆ ನಿಭಾಯಿಸುತ್ತಾರೆ... ಮೆಡಿಕಲ್ ವಿದ್ಯಾಭ್ಯಾಸಕ್ಕೆ ಎಷ್ಟೊಂದು ಖರ್ಚು ಮಾಡಿರಬಹುದು. ಈಗೇನು ಮಾಡುತ್ತಾರೆ... ಆಸ್ಪತ್ರೆ ಕಟ್ಟಿಸಲೂ ಬಹಳಷ್ಟು ಹಣ ಸುರಿದಿರಬಹುದು... ಈಗ ಸಾಲ ಹೇಗೆ ತೀರಿಸುತ್ತಾರೆ... ರೈತರ ತರಹ ಆದೊಂದು ದಿನ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾರೋ ಏನೋ?' ಹೀಗೆ ಏನೇನೋ ವಿಚಾರ ಬರುತ್ತಲೇ ಇರುತ್ತದೆ!

**ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

## ನಿಮ್ಮದರಲ್ಲೆ ಅರ್ಧ



ರಘುನಾಥರಾಯರು ಹಳ್ಳಿಯ ಸರಪಂಚರು. ಒಮ್ಮೆ ಅವರು ವೈದ್ಯರ ಬಳಿಗೆ ಹೋಗಿದ್ದರು.

'ನಿಮಗೆ ಯಾವ ಸಮಸ್ಯೆಯಿದೆ?' ಎಂದು ವೈದ್ಯರು ಕೇಳಿದರು.

'ವೈದ್ಯರೇ, ತಲೆ ತಿರುಗಿದಂತೆ ಆಗುತ್ತದೆ. ಕೈ ಕಾಲುಗಳಿಗೆ ನಡುಕ ಬರುತ್ತದೆ' ಎಂದರು ರಘುನಾಥರಾಯರು.

'ನೀವು ಡ್ರಿಂಕ್ಸ್ ಮಾಡ್ತೀರಾ?' ಎಂದು ವೈದ್ಯರು ಕೇಳಿದರು.

'ನಾನು ಮನೆಯಿಂದ ಗ್ಲಾಸ್ ತಂದಿಲ್ಲ. ನಿಮ್ಮ ಗ್ಲಾಸಿನಲ್ಲಿಯೇ ಅರ್ಧ ಗ್ಲಾಸ್ ಕೊಡಿ ಸಾಕು!!' ಎನ್ನಬೇಕೇ ರಘುನಾಥರಾಯರು!

ವೈದ್ಯರು ಅವರ ಮುಖ ನೋಡಿದರು!

**ಶೋಭಾ ಪ್ರಮೋದ್, ಮನಗಾವ್**



ಚಿತ್ರಗಳು: ಗಣೇಶ ಆಚಾರ್ಯ